ಪ್ರಬಂಧ

# ಸಾಲುಗಾರನ ಸ್ವಗತ



**ಎಚ್. ಭರತ್‌ಕುಮಾರ್**

ಕಲೆ: ಗುಜ್ಜಾರ್

ಸಾಲು ಹಾಗೂ ಸಾಲ ಚಿಕ್ಕಂದಿನಿಂದಲೂ ಚಿರಪರಿಚಿತವಾದ ಪದಗಳು. ಒಂದು ಸಾಮೂಹಿಕ ಶಿಸ್ತಿನ ಸಂಕೇತವಾದರೆ, ಮತ್ತೊಂದು ಆರ್ಥಿಕ ಶಿಸ್ತು ಉಲ್ಟಾ ಹೊಡೆಯುವ ಸೂಚನೆ. ಎಲ್ಲಿಯವರೆಗೆ ಈ ಎರಡೂ ನಮಗೆ ಅನ್ವಯವಾಗುವುದಿಲ್ಲವೋ ಅಲ್ಲಿಯವರೆಗೆ ಅದು ನೋಡಲು ಚಂದವೇ. ಆದರೆ, ನಾವೇ ಸಾಲಿನಲ್ಲಿ ನಿಲ್ಲಬೇಕಾಗಿ ಬಂದಾಗ ಮಾತ್ರ ಅದು ಅಸಹನೀಯ. ಅದೂ ಗೊತ್ತು ಗುರಿಯಿಲ್ಲದೇ ನಿಲ್ಲುವುದೆಂದರೆ, ನನಗೆ ಅಲರ್ಜಿ. ಹಾಗಾಗಿ ಸಾಲಿನಲ್ಲಿ ನಿಲ್ಲಲಾಗದು ಎಂದೇ ಅನೇಕ ಸಿನಿಮಾಗಳನ್ನೇ ತ್ಯಜಿಸಿದ್ದಿದೆ. ಪ್ರಯಾಣಗಳನ್ನು ಮುಂದೂಡಿದ್ದಿದೆ, ಗೋಪುರಗಳಿಗೆ ಕೈಯೆತ್ತಿ ಮುಗಿದು ದೇವತಾ ದರ್ಶನಗಳನ್ನು ಪೂರೈಸಿದೆ ಹಾಗೂ ಅನ್ನ ಪ್ರಸಾದಗಳಿಂದ ತಪ್ಪಿಸಿಕೊಂಡಿದ್ದೂ ಇದೆ.

ಕಡೆಗೂ ಸಾಲಿನಲ್ಲಿ ನಿಲ್ಲಲೇಬೇಕಾದ 'ದಿವ್ಯ'ವನ್ನೂ ಹದಿನಾಲ್ಕು ವರ್ಷದ ಹಿಂದೆ ನಡೆಸಬೇಕಾಗಿ ಬಂದಿತ್ತು. ಸಾಲಲ್ಲಿ ನಿಲ್ಲಲಾರೆ ಎಂಬ ನಿಲುವು ಸಡಿಲಿಸಲು ಮುಖ್ಯ ಕಾರಣ, ಮಗಳ ಭವಿಷ್ಯ. ಅದೇನೂ ಸಿನಿಮಾ ತಿಕೀಟು ಅಲ್ಲವಲ್ಲ. ಇನ್ನೂ ಮೂರನೇ ಹುಟ್ಟಿದ ಹಬ್ಬ ಆಚರಿಸಿಕೊಳ್ಳಬೇಕಿರುವ ಕಂದವನ್ನು ಶಾಲೆಗೆ ಅಟ್ಟಬೇಕಲ್ಲಾ ಎಂಬ ನೋವಿದ್ದರೂ, ಮನೆಯಲ್ಲಿ ಏಕ ಪಕ್ಷೀಯವಾಗಿ ಘೋಷಿಸಲಾಗಿದ್ದ ಕದನ ವಿರಾಮಕ್ಕೆ ಭಂಗ ಬಂದೀತೆಂಬ ಆತಂಕದಿಂದ, ಪ್ರತಿಷ್ಠಿತ ಶಾಲೆಯ ಮುಂದೆ ಸಾಲುಗಟ್ಟಿ ನಿಲ್ಲಲು ಹೊರಟೆ.

ಆಗಿನ್ನೂ ಮದರಾಸಿನಲ್ಲಿ ಮಸುಕು, ಮಸುಕು–ನಸುಗತ್ತಲು. ಹೌದೋ ಅಲ್ಲವೋ ಎನ್ನುವಷ್ಟು ಮಂಜು ಮುಸುಕಿತ್ತು. ಸೆಕೆಯಿಲ್ಲ. ಚೂರೇ ಚೂರು ಚಳಿ. ಆದರೇನು, ಮದರಾಸಲ್ಲಿ ಮಂಜು ಎಂದು ಹಾಡು ಬರಿಯುವ ಸಮಯವಲ್ಲ ಅದು, ಮಗಳ ಭವಿಷ್ಯದ ಪ್ರಶ್ನೆ.

ಬೆಳಿಗ್ಗೆ ಐದು ಗಂಟೆಗೇ ಎದ್ದರೂ, ಪಕ್ಕದಲ್ಲೇ ಇರುವ ಶಾಲೆಗೆ ಬರುವಷ್ಟು ಹೊತ್ತಿಗೆ ಅರ್ಧ ಗಂಟೆ ಕಳೆದೇ ಹೋಗಿತ್ತು. 'ಹ... ಹ... ಬೆಳಿಗ್ಗೆ ಬೇಗನೇ ಬಂದಿರುವ ನಾನೆಷ್ಟು ಜಾಣ' ಎಂಬ ಹೆಮ್ಮೆ ಮದರಾಸಿನ ಮಂಜಿಗಿಂತ ಫಾಸ್ಟಾಗಿ ಕರಗಿ ಹೋಗಿತ್ತು. ನಾನು ಹೋಗುವಷ್ಟೊತ್ತಿಗೆ, ಆ ಶಾಲೆಯ ಮುಂದೆ ಜನ ಸಾಗರವೇ ನೆರೆದಿತ್ತು. ಎಲ್ಲರೂ ಬಂದಿರುವುದು ಅರ್ಜಿ ಪಡೆಯಲು ಮಾತ್ರ. ಹೇಗೆ ಹೇಗೋ ಮಾಡಿಕೊಂಡು, ಆರಂಭ ಅಂತ್ಯವೇ ಕಾಣದ ಗೊಂದಲ ಗೂಡಾದ ಗುಂಪನ್ನು ಸೇರಿಕೊಂಡೆ. ಯಾರ ಹಿಂದೆ ಯಾರು ನಿಲ್ಲಬೇಕು ಎಂಬುದೇ ತಿಳಿಯುತ್ತಿರಲಿಲ್ಲ. ಶಾಲೆ ಒಳಾವರಣದ ಗೇಟಿನ ಮುಂದೆ ನಿಂತ, ಆರೆಂಟು ಜನ